ಉದ್ದೇಶಕ್ಕಾಗಿ ಖರ್ಚು ಮಾಡಬೇಕಾಗುತ್ತದೆ. ಎರಡನೆಯ ಉದ್ದೇಶಕ್ಕೆ ಖರ್ಚು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಪ್ಪ.—ಈ ಯೋಜನೆಯ ಅಂದಾಜು ಮೊಬಲಗೆಷ್ಟು?

ಶ್ರೀ ವೀರೇಂದ್ರ ಪಾಟೀಲ್.—ಎರಡು ಕೋಟಿ ರೂಪಾಯಿಗಳಾಗುತ್ತದೆ.

Freedom Fighters in receipt of Pension facilities

400. Sri N. LOKAYYA NAIK (Virajpet).—

Will the Minister of State for Minor Irrigation be pleased to state :—

the number of persons in the State considered as freedom fighters and are in receipt of pension facilities ?

Sri A. J. DODDAMETI (Minister of State for Minor Irrigation).—

3,069.

ಶ್ರೀ ಎನ್. ಲೋಕಯ್ಯನಾಯ್ಕ್.—ವಿಶ್ರಾಂತಿ ವೇತನವನ್ನು ಯಾವ ಯಾವ ಕಾರಣಗಳಿಂದ ಕೊಡಿದ್ದರೆ ಕೊಡುತ್ತೀರಾ ?

ಶ್ರೀ ಎ. ಜೆ. ದೊಡ್ಡಮೇಟಿ.—55 ವರ್ಷ ವಯಸ್ಸಾಗಿರಬೇಕು. 6 ತಿಂಗಳು ಜೈಲು ಶಿಕ್ಷೆ ಅನುಭವಿಸಿರಬೇಕು ಮತ್ತು ಅವರ ವಾರ್ಷಿಕ ಉತ್ಪನ್ನ 2,400 ರೂಪಾಯಿಗಳೊಳಗೆ ಇರಬೇಕು. ಇಷ್ಟು ಅರ್ಹತೆ ಇದ್ದರೆ ಕೊಡಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಕೆ. ಟಿ. ಭಾಷ್ಯಂ ಎಂಬ ಸ್ವತಂತ್ರ್ಯ ಹೋರಾಟಗಾರ ರೊಬ್ಬರು ಇದ್ದಿದ್ದು ನಿಜವೇ ! ಅವರ ಪತ್ನಿ ಈ ವೇತನಕ್ಕಾಗಿ ಅರ್ಜಿ ಸಲ್ಲಿಸಿದ್ದು ನಿಜವೇ ? ಅವರಿಗೆ ಈ ವೇತನವನ್ನು ಮಂಜೂರು ಮಾಡುವುದಕ್ಕೆ ಮೊದಲು ಅವರು ಸತ್ತಿದ್ದು ನಿಜವೇ !

ಶ್ರೀ ಎ. ಜೆ. ದೊಡ್ಡಮೇಟಿ.—ಕೆ. ಟಿ. ಭಾಷ್ಯಂ ಅವರ ಪತ್ನಿ ಅರ್ಜಿ ಕೊಟ್ಟಿದ್ದು ನಿಜವಿದೆ. ಅವರಿಗೆ 50 ರೂಪಾಯಿಗಿಂತ ಹೆಚ್ಚು ವಿಶ್ರಾಂತಿ ವೇತನವನ್ನು ಕೊಡುವುದಕ್ಕೆ ನನಗೆ ಅಧಿಕಾರ ಇರಲಿಲ್ಲ. ಆದ್ದರಿಂದ ಅದನ್ನು ಮಂಜೂರಾತಿಗಾಗಿ ಕ್ಯಾಬಿನೆಟ್‌ಗೆ ಕಳಿಸಲಾಯಿತು. ನಂತರ ಕ್ಯಾಬಿನೆಟ್‌ನಲ್ಲಿ 100 ರೂಪಾಯಿಗಳ ವಿಶ್ರಾಂತಿ ವೇತನ ಕೊಡಬೇಕೆಂದು ತೀರ್ಮಾನವಾಯಿತು. ಅದರಂತೆ ಅವರು ತಗೆದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ವಿಶ್ರಾಂತಿ ವೇತನಕ್ಕಾಗಿ ಅವರು ಮನೆಗೂ ವಿಧಾನಸೌಧಕ್ಕೂ ಬಹಳ ಕಾಲ ಓಡಾಡಿ ಅವರು ಸತ್ತ ಮೇಲೆ ವಿಶ್ರಾಂತಿ ವೇತನವನ್ನು ಮಂಜೂರು ಮಾಡಿದ್ದು ನಿಜವಲ್ಲವೇ !

ಶ್ರೀ ಎ. ಜೆ. ದೊಡ್ಡಮೇಟಿ.—ನಿಜವಲ್ಲ.

ಶ್ರೀ ಡಿ. ಬಿ. ಕಲ್ಮಂಕರ್.—ಈಗ ವಿಶ್ರಾಂತಿ ವೇತನ ಪಡೆಯುತ್ತಿರುವ 3,069 ಮಂದಿಯಲ್ಲಿ ಎಷ್ಟು ಮಂದಿಗೆ 6 ತಿಂಗಳ ಸಜಾ ಆಗಿದೆ ! ಸಜಾ ಆಗಿರುವ ಬಗ್ಗೆ ಇವರಿಗೆ ಕಾಂಗ್ರೆಸ್ ಕಮಿಟಿಯವರು ಸರ್ಟಿಫಿಕೇಟ್ ಕೊಟ್ಟಿದ್ದಾರೆಯೇ ಅಥವಾ ಜೈಲ್ ಅಧಿಕಾರಿಗಳು ಕೊಟ್ಟಿದ್ದಾರೆಯೇ?

ಶ್ರೀ ಎ. ಜೆ. ದೊಡ್ಡಮೇಟಿ.—ಜೈರ್ ಅಧಿಕಾರಿಗಳು ಸರ್ಟಿಫಿಕೇಟ್ ಕೊಡಬೇಕು. ಜೈರ್ ಸರ್ಟಿಫಿಕೇಟ್ ಸಿಗದಿದ್ದರೆ ಪ್ರಮಾಣವಚನ ಮಾಡಬೇಕೆಂದು ನಿಯಮ ಮಾಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಕೆ. ಟಿ. ಭಾಷ್ಯಂ ಅವರ ಪತ್ನಿ ಅನು ನೀಗಿದ ಮೇಲೆ ಅವರಿಗೆ ವಿಶ್ರಾಂತಿ ವೇತನವನ್ನು ಮಂಜೂರು ಮಾಡಿರುವುದು ನಿಜವಲ್ಲವೇ ? ಆ ರೀತಿ ನಿಧಾನ ಮಾಡಿದ್ದು ಸರಿಯೇ ?

ಶ್ರೀ ಎ. ಜೆ. ದೊಡ್ಡಮೇಟಿ.—ನಿಧಾನ ಮಾಡಲಿಲ್ಲ. 50 ರೂಪಾಯಿಗಳಿಗಿಂತ ಹೆಚ್ಚು ವಿಶ್ರಾಂತಿ ವೇತನ ಕೊಡುವುದಕ್ಕೆ ನನಗೆ ಅಧಿಕಾರವಿರಲಿಲ್ಲವಾದ್ದರಿಂದ ಅದನ್ನು ಕ್ಯಾಬಿನೆಟ್‌ಗೆ ಕಳುಹಿಸಬೇಕಾಯಿತು. ಆಲ್ಲಿ ಅದು ತೀರ್ಮಾನವಾಗಬೇಕಾದರೆ ನಾಲ್ಕೈದು ತಿಂಗಳವರೆಗೆ ನಿಧಾನವಾಯಿತು. ಅವರು ಮೊನ್ನೆ 7ನೇ ತಾರೀಖು ಸತ್ತದ್ದು ನನಗೆ ಗೊತ್ತಿದೆ. ಅದಕ್ಕೆ ಒಂದು ವರ್ಷಕ್ಕಿಂತ ಮುಂಚೆಯೇ ಅವರಿಗೆ ವಿಶ್ರಾಂತಿವೇತನ ಮಂಜೂರಾಗಿತ್ತು.

ಶ್ರೀ ಎಸ್. ಬಂಗಾರಪ್ಪ.—ಈ ಗಾಗಲೇ 3,069 ಜನರಿಗೆ ಈ ಸೌಲಭ್ಯ ಸಿಕ್ಕಿದೆ. ತಾವು ಮಂತ್ರಿಯಾದ ಮೇಲೆ ಯಾರಿಗೆ ಕೊಡಬೇಕು ಎಂಬುದನ್ನು ಸರಿಯಾಗಿ ಪರಿಶೀಲನೆ ಮಾಡಿ ಕೊಟ್ಟಿದ್ದೀರಿ. ತಮ್ಮ ಬಗ್ಗೆ ನನಗೆ ಗೌರವವಿದೆ. ಆದರೆ ತಮಗೆ ಮುಂಚೆ ಇದನ್ನು ನೋಡಿ ಕೊಳ್ಳುತ್ತಿದ್ದ ಮಂತ್ರಿಯವರ ಕಾಲದಲ್ಲಿ ಜೈರ್ ಸರ್ಟಿಫಿಕೇಟನ್ನು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಕೊಟ್ಟರೆ ಸಾಕು ಎಂದು ಆದೇಶ ಕೊಟ್ಟಿದ್ದರು. ಇದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಆ ರೀತಿ ಎಷ್ಟು ಜನರಿಗೆ ಕೊಡಲಾಗಿತ್ತು ?

ಶ್ರೀ ಎ. ಜೆ. ದೊಡ್ಡಮೇಟಿ.—ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಕೊಟ್ಟಂಥ ಸರ್ಟಿಫಿಕೇಟ್ ಆಧಾರದ ಮೇಲೆ ಈ ವೇತನವನ್ನು ಯಾರಿಗೂ ಕೊಟ್ಟಿಲ್ಲ. ಜೈರ್ ಸರ್ಟಿಫಿಕೇಟ್ ಮೇಲೆ ಮತ್ತು ಪ್ರಮಾಣ ಪತ್ರದ ಮೇಲೆ ಮಾತ್ರ ಕೊಡಲಾಗುತ್ತಿದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಈ ವೇತನಕ್ಕಾಗಿ ಇನ್ನೂ ಎಷ್ಟು ಜನ ಅರ್ಜಿ ಹಾಕಿ ಕೊಂಡಿದ್ದಾರೆ ? ಮತ್ತು ಸ್ವಾತಂತ್ರ್ಯ ಬಂದು 23 ವರ್ಷಗಳಾದರೂ ಕೂಡ ಎಲ್ಲರಿಗೂ ಈ ವೇತನವನ್ನು ಕೊಡದಿರುವುದಕ್ಕೆ ಕಾರಣವೇನು ? ಎಲ್ಲರಿಗೂ ಕೊಡಬೇಕಾದರೆ ಇನ್ನೂ ಎಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಎ. ಜೆ. ದೊಡ್ಡಮೇಟಿ.—ಈ ಕಾರ್ಯಕ್ರಮವನ್ನು ಮೊದಲೇ ಕೈಕೊಳ್ಳಬೇಕಾಗಿತ್ತು. ಸ್ವಾತಂತ್ರ್ಯ ಬಂದಮೇಲೆ ನಾವು ಮತ್ತು ನೀವು ಬೇರೆ ಬೇರೆ ರಾಜ್ಯಗಳಲ್ಲಿ ಇದ್ದೆವು. ಅದಕ್ಕೋಸ್ಕರ ತಡವಾಯಿತು. ಈ ಯೋಜನೆ 1967ನೇ ಫೆಬ್ರುವರಿಯಲ್ಲಿ ಜಾರಿಗೆ ಬಂತು.

ಶ್ರೀ ವಾಟಾಳ್ ನಾಗರಾಜ್.—ಭಾಷ್ಯಂ ಅವರ ಪತ್ನಿಯವರಿಗೆ ಈ ವೇತನ ಕೊಡಲು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಕೈಕೊಳ್ಳಲು ನಾಲ್ಕು ತಿಂಗಳ ಕಾಲ ವಿಳಂಬವಾಗುವುದಕ್ಕೆ ಕಾರಣವೇನು ? ಅದೇ ಎಕ್ಸ್‌ಪ್ರೋ-70ಕ್ಕೆ ಕೂಡಲೇ ಆರೂವರೆ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದಿರಿ, ಈ ತಾರತಮ್ಯ ಏತಕ್ಕೆ ಮಾಡುತ್ತೀರಿ ?

ಶ್ರೀ ಎ. ಜೆ. ದೊಡ್ಡಮೇಟಿ.—ಅವರು ಸಾಯುವುದಕ್ಕೆ ಒಂದು ವರ್ಷಕ್ಕಿಂತ ಮೊದಲು ವಿಶ್ರಾಂತಿ ವೇತನ ಪಡೆದಿದ್ದರು.

ಶ್ರೀ ಬಿ. ದೊಡ್ಡಬೋರೇಗೌಡ.—ಎಷ್ಟು ಅರ್ಜಿಗಳು ಇನ್ನೂ ನಿಮ್ಮ ಮುಂದೆ ಇವೆ ?

ಶ್ರೀ ಎ. ಜೆ. ದೊಡ್ಡಮೇಟಿ.—ಸೆಪ್ಟಂಬರು 1ನೇ ತಾರೀಖಿನವರೆಗೆ 5,479 ಅರ್ಜಿಗಳು ನಮ್ಮ ಕಡೆಗೆ ಬಂದಿದ್ದವು. ಇದರಲ್ಲಿ 3,069 ಅರ್ಜಿಗಳು ಎರೆಯಾಗಿದೆ. ಇದಾದ ಮೇಲೆ ಹಿಂದೆ ಇದ್ದ ರೂಲ್ಸ್‌ಗಳನ್ನು ಸಡಿಲಿಸಿದ ಮೇಲೆ ಪುನಃ 1,292 ಅರ್ಜಿಗಳು ಅರ್ಹವಾಗಿವೆ. ಇದರ ಬಗ್ಗೆ ಇನ್ನೂ ನಿರ್ಣಯ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಐ. ಸೋಮಶೇಖರಪ್ಪ.—ಮೊದಲು ವಯಸ್ಸಿನ ಮಿತಿ 55 ಎಂದು ಇದ್ದುದನ್ನು ಈಚೆಗೆ ನಿಮಿಲು ಮಾಡಿದಿರಿ ಮತ್ತು ಆರು ತಿಂಗಳು ಎಂದು ಇದ್ದುದನ್ನು ಮೂರು ತಿಂಗಳಿಗೆ ಇಳಿಸಿದ್ದೀರಿ. ಇದರಿಂದ ತಮಗೆ ಬಂದಿರುವ ಒಟ್ಟು ಅರ್ಜಿಗಳಲ್ಲಿ ಇನ್ನು ಎಷ್ಟು ಪೆಂಡಿಂಗ್‌ನಲ್ಲಿವೆ ?

ಶ್ರೀ ಎ. ಜೆ. ದೊಡ್ಡಮೇಟಿ.—1,292 ಅರ್ಜಿಗಳು ಎಂದು ಆಗಲೇ ಹೇಳಿದೆ.